**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ,**
**ಚಿತ್ರದುರ್ಗ**
**ಒ ಎಸ್ ಃ 1 /2025**

ಡಿ ಡಬ್ಲ್ಯೂ : 1

<u>ಪಾಟೀಸವಾಲು : ಹೆಚ್ ಎಂ ಎಸ್ ನ ವಕೀಲರಿಂದ ವಾದಿಯರ ಪರ</u>

11. ನಾನು ಬಿ ಕಾಂ ಪದವೀಧರ. ನಾನು ಯಾವುದೇ ಸರ್ಕಾರಿ ನೌಕರಿಯನ್ನು ಮಾಡಿಲ್ಲ. ನನ್ನ ಸ್ವಂತ ಊರು ಹಿರಿಯೂರು ತಾಲೂಕಿನ ವೇಣುಕಲ್ಲು ಗುಡ್ಡ. ನನ್ನ ಸ್ವಂತ ಊರು ಗೂಳ್ಯ ಗ್ರಾಮ ಎನ್ನುವುದು ಸರಿಯಲ್ಲ. ದಾವೆ ಬಗ್ಗೆ ನನಗೆ ಮಾಹಿತಿ ಇದೆ. ನನಗೆ 2ನೇ ವಾದಿಯ/ಮುದ್ದಪ್ಪನ ಪರಿಚಯವಿಲ್ಲ. ಅದೇ ರೀತಿ 5ನೇ ವಾದಿ/ನಿಜಲಿಂಗಪ್ಪ ಇವರ ಗುರುತು ಇಲ್ಲ. 6ನೇ ವಾದಿಯ ಗುರುತು ಕೂಡ ಇಲ್ಲ. ಸದರಿ 2,5 ಮತ್ತು 6ನೇ ವಾದಿಯರು ವೇಣುಕಲ್ಲು ಗುಡ್ಡದ ಖಾಯಂ ವಾಸಿಗಳು ಎನ್ನುವುದು ಗೊತ್ತಿಲ್ಲ. ನಾನು ಕಾಡು ಗೊಲ್ಲರ ಸಮುದಾಯಕ್ಕೆ ಸೇರಿದವನು. ವೇಣುಕಲ್ಲುಗುಡ್ಡದ ಗ್ರಾಮದಲ್ಲಿ ದೇವತೆಗಳಾದ ಯತ್ತಪ್ಪ, ಚಿತ್ರಲಿಂಗ, ಈರನಾಗಮ್ಮ ಹಾಗೂ ಕದರಿನರಸಿಂಹ ಇವರ ದೇವಸ್ಥಾನಗಳು ಇವೆ. ಅದೇ ರೀತಿ ಕುರುಬ ಜನಾಂಗಕ್ಕೆ ಸೇರಿದ ಬೀರಲಿಂಗಸ್ವಾಮಿ, ಮಾವುರ್ದಮ್ಮ ಹಾಗೂ ತಿಮ್ಮಪ್ಪ ಈ ದೇವತೆಗಳ ದೇವಸ್ಥಾನಗಳು ಕೂಡ ಇವೆ ಎನ್ನುವುದು ನಿಜ. ಸದರಿ ಗ್ರಾಮದಲ್ಲಿ ಹಳ್ಳಿಕಾರ

ಜನಾಂಗದ ಜನರು ಕೂಡ ವಾಸವಾಗಿದ್ದಾರೆ ಎನ್ನುವುದು ನಿಜ. ಆ ಸಮುದಾಯಕ್ಕೆ ಸೇರಿದ ಕಾಟಮ್ಮಲಿಂಗೇಶ್ವರ, ಚಿಕ್ಕಲಕ್ಕಮ್ಮ ಹಾಗೂ ದೊಡ್ಡಲಕ್ಕಮ್ಮ ದೇವಸ್ಥಾನಗಳು ಕೂಡ ಇವೆ ಎನ್ನುವುದು ನಿಜ. ಮಡಿವಾಳ ಜನಾಂಗಕ್ಕೆ ಸೇರಿದ ಪಾಥಲಿಂಗೇಶ್ವರ ದೇವಸ್ಥಾನ, ಆದಿ ಕರ್ನಾಟಕ ಸಮುದಾಯಕ್ಕೆ ಸೇರಿದ ಬೇವಿನ ಹಲ್ಲಮ್ಮ, ಲಕ್ಷ್ಮಿದೇವಿ, ಗಲ್ಲೇ ಮಾರಮ್ಮ ಹಾಗೂ ಮೈಲಾರಲಿಂಗೇಶ್ವರ ಮತ್ತು ದೇವಸ್ಥಾನಗಳು ಮತ್ತು ಚಲುವಾದಿ ಸಮುದಾಯಕ್ಕೆ ಸೇರಿದ ಮೈಲಾರಲಿಂಗೇಶ್ವರ ಹಾಗೂ ಮಾರಮ್ಮ ದೇವಸ್ಥಾನಗಳು ಇವೆ ಎಂದರೆ ಇರಬಹುದು. ಅಲ್ಲದೇ ಎಲ್ಲಾ ಸಮುದಾಯಕ್ಕೂ ಸೇರಿದ ಈಶ್ವರ, ಆಂಜನೇಯ ಸ್ವಾಮಿ ಹಾಗೂ ಸಿದ್ದಪ್ಪ ಇವರ ದೇವಸ್ಥಾನಗಳು ಇವೆ ಎಂದರೆ ಆ ದೇವಸ್ಥಾನಗಳ ಜೊತೆಗೆ ವೇಣುಗೋಪಾಲ ಸ್ವಾಮಿ ಅಥವಾ ಶಕುನದ ರಂಗನಾಥ ಸ್ವಾಮಿ ಹಾಗೂ ಚೌಡೇಶ್ವರ ದೇವಸ್ಥಾನಗಳು ಕೂಡ ಇವೆ. ಸದರಿ ವೇಣುಗೋಪಾಲ ಸ್ವಾಮಿ ಹಾಗೂ ಚೌಡೇಶ್ವರಿ ದೇವಸ್ಥಾನಗಳು ವೇಣುಕಲ್ಲುಗುಡ್ಡದ ಗ್ರಾಮದಲ್ಲಿ ಇರುವುದಿಲ್ಲ ಎನ್ನುವುದು ಸರಿಯಲ್ಲ. ಆ ಎರಡು ದೇವಸ್ಥಾನಗಳು ವೇಣುಕಲ್ಲುಗುಡ್ಡದಲ್ಲಿ ಇವೆ ಎಂದರೆ ಸರ್ವೆ ನಂಃ118ರ ಬೆಟ್ಟದ ಭಾಗದಲ್ಲಿ ಅವು ಇವೆ. ಸದರಿ ವೇಣುಗೋಪಾಲ ಸ್ವಾಮಿ ವಾದಿಯರ ಮನೆ ದೇವರು ಎನ್ನುವುದು ಸರಿಯಲ್ಲ. ತಲೆ ತಲೆ ಮಾರುಗಳಿಂದ ಆ ದೇವಸ್ಥಾನ ಇರುವುದರಿಂದ ಮತ್ತು ಎಲ್ಲರೂ ಅಲ್ಲಿ ಪೂಜಿಸುತ್ತಿರುವುದರಿಂದ ಅದನ್ನು ನಾನು ಪುರಾತನ ದೇವಸ್ಥಾನ ಎಂದು ನನ್ನ ಮುಖ್ಯ ವಿಚಾರಣೆಯ 3ನೇ ಕಂಡಿಕೆಯಲ್ಲಿ ಹೇಳಿದ್ದೇನೆ. ವೇಣುಕಲ್ಲುಗುಡ್ಡ ಹಾಗೂ ವೇಣುಕಲ್ಲುಗ್ರಾಮ ಇವುಗಳ ಹಿನ್ನಲೆಯನ್ನು ಸ್ವಲ್ಪಮಟ್ಟಿಗೆ ತಿಳಿದುಕೊಂಡಿದ್ದೇನೆ. ಪುರಾತನ ಕಾಲದ ಯಾವ ದಾಖಲೆಗಳು ಲಭ್ಯವಿಲ್ಲದ ಕಾರಣ ವೇಣುಕಲ್ಲುಗುಡ್ಡವನ್ನು ಯಾರು ಆಳ್ವಿಕೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಬಿ ಎನ್ ರೈಸ್ ಗೆಜಟಿಯರ್ ಹಾಗೂ ಹಯವದನ್ ರಾವ್ ಗೆಜಟಿಯರ್ ಇವುಗಳ ಬಗ್ಗೆ ನನಗೆ ಗೊತ್ತಿಲ್ಲ. "ಚಿತ್ರದುರ್ಗ ದರ್ಶಿನಿ" ಎಂಬ ಪುಸ್ತಕದಲ್ಲಿ ವೇಣುಕಲ್ಲುಗುಡ್ಡ ಬಗ್ಗೆ ಹೇಳಲಾಗಿದೆ ಎಂದರೆ ಅವೆಲ್ಲಾ ಕಟ್ಟು ಕಥೆ ಇದ್ದು ಎಲ್ಲೂ ಕೂಡ ನಿಖರವಾದ ಮಾಹಿತಿ ಲಭ್ಯವಿರುವುದಿಲ್ಲ. ನಿಡುಗಲ್ ಸಂಸ್ಥಾನ ಹಾಗೂ ವೇಣುಕಲ್ಲುಗುಡ್ಡ ಸಂಸ್ಥಾನ ಇವುಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ರಾಜಾ ಕಸ್ತೂರಿ ರಂಗಪ್ಪನಾಯಕ ಹಾಗೂ ಆತನ ಪೂರ್ವಿಕರು ವೇಣುಕಲ್ಲುಗುಡ್ಡ ಸಂಸ್ಥಾನವನ್ನು ಹಾಗೂ ಸುತ್ತಲಿನ ಗ್ರಾಮಗಳನ್ನು ಆಳ್ವಿಕೆ ಮಾಡುತ್ತಿದರು ಹಾಗೂ ಅವರ ಕಾಲದಲ್ಲಿ ಕೋಟೆ, ಕೊತ್ತಲು, ಭತೇರಿ ಹಾಗೂ

ವೇಣುಗೋಪಾಲಸ್ವಾಮಿ ದೇವಸ್ಥಾನ ವನ್ನು ಕಟ್ಟಿಸಿದ್ದಾರೆ ಎನ್ನುವುದು ಸರಿಯಲ್ಲ. ಅವರು ಆಳ್ವಿಕೆ ಮಾಡಿ ಅವುಗಳನ್ನು ಕಟ್ಟಿಸಿದ ಬಗ್ಗೆ ಈಗಲೂ ಕೂಡ ಅಲ್ಲಿ ಕುರುಹುಗಳು ಇವೆ ಎನ್ನುವುದು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ವೇಳೆ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಚಿತ್ರದುರ್ಗ